## ನಿರ್ವಹಣಾ ಸೂಚಕಗಳ ನೇರದಲ್ಲಿ ಅಧ್ಯಾಪಕರು ಮಾಡಿಕೊಂಡ ಸ್ವಯಂ ಮೌಲ್ಯಮಾಪನ.

ಅಧ್ಯಾಪಕರ ಹೆಸರು --------------------------ಸಲ್ಲಿಸಿದ ಸೇವೆ (ವರ್ಷಗಳಲ್ಲಿ)----------------
ಮೌಲ್ಯಮಾಪನ ವರ್ಷ-----------

**ಸೂಚನೆ :**

- ✓ ನಿಮ್ಮ ಮೌಲ್ಯಮಾಪನ ಪ್ರಾಮಾಣಿಕವಾಗಿರಲಿ ಇದು ನಿಮ್ಮ ವ್ಯಕ್ತಿತ್ವ ಮತ್ತು ವೃತ್ತಿ ಬೆಳವಣಿಗೆಗೆ ಮಾತ್ರ. ಇದನ್ನು ಆಧರಿಸಿ ಪ್ರಶಂಸೆ /ದಂಡನೆಯನ್ನು ನೀಡುವುದಿಲ್ಲ. ಈ ವಿವರವನ್ನು ಯಾರಿಗೂ ನೀಡಬಾರದು. ಆದರೆ ಉಸ್ತುವಾರಿದಾರರು ಕೇಳಿದಾಗ ತೋರಿಸಬೇಕು.
- ✓ ಉಸ್ತುವಾರಿ ಅಧಿಕಾರಿಗಳು ಇಲ್ಲಿನ ಮಾಹಿತಿ ಆಧಾರಿಸಿ ಬಹುಮಾನ / ದಂಡನೆಯನ್ನು ನೀಡತಕ್ಕದ್ದಲ್ಲ. ಒಂದು ವೇಳೆ ಬಳಸಿಕೊಂಡರೆ ಆ ಕ್ರಮವನ್ನು ಹಿರಿಯ ಅಧಿಕಾರಿ/ಕಛೇರಿಗಳು ಊರ್ಜಿತಗೊಳಸಕೂಡದು.
- ✓ ಐದು ಬಿಂದು ಶ್ರೇಣಿಯಲ್ಲಿ ಅಂಕಗಳನ್ನು ನೀಡುವುದು. ಅಂದರೆ 1. ಕನಿಷ್ಟ 2. ಸುಧಾರಿಸಬೇಕು; 3. ಪರವಾಗಿಲ್ಲ; 4 ಸಮಾಧಾನಕರ; 5. ಉತ್ತಮ. ಕೊರತೆಯಾದ ಕ್ಷೇತ್ರಗಳಲ್ಲಿ ಹೆಚ್ಚಿನ ಪರಿಶ್ರಮ ಹಾಕುವುದು.
- ✓ ಉಸ್ತುವಾರಿದಾರರು (ಮುಖ್ಯೋಪಾಧ್ಯಾಯರು, ಸಿ.ಆರ್.ಪಿ ಮತ್ತು ಇತರೆ) ಸ್ವಮೌಲ್ಯ ಮಾಪನ ದಾಖಲೆ ಪರಿಶೀಲಿಸಿ ಸೂಕ್ತ ಹಿಮ್ಮಾಹಿತಿ ನೀಡುವುದು. ಹೀಯಾಳಿಸದೆ–ಕೊರತೆಯ ಕ್ಷೇತ್ರಗಳನ್ನು ಅವರ ಗಮನಕ್ಕೆ ತರುವುದು.
- ✓ ಪ್ರತಿ ತ್ರೈಮಾಸಿಕದಲ್ಲಿ ಪ್ರತಿ ಶಿಕ್ಷಕರು ಈ ನಮೂನೆಯಲ್ಲಿ ಸ್ವಮೌಲ್ಯಮಾಪನ ಮಾಡಿಕೊಂಡು ತಮ್ಮಲ್ಲಿ ಆಗುತ್ತಿರುವ ಬದಲಾವಣೆಯನ್ನು ಗುರುತಿಸಿಕೊಳ್ಳುವುದು.

| ಕ್ರ ಸಂ | ಐಟಂಗಳು – ಶಿಕ್ಷಕರಿಗಾಗಿ | ಸೆಪ್ಟೆಂಬರ್ | ಡಿಸೆಂಬರ್ | ಮಾರ್ಚ್ |
|---|---|---|---|---|
| 1 | ನಾನು ಸಮುದಾಯದ ಸಂಪನ್ಮೂಲಗಳನ್ನು ಕಲಿಕೆಗೆ ಪೂರಕವಾಗುವಂತೆ ಬಳಸಿಕೊಳ್ಳುತ್ತೇನೆ. | | | |
| 2 | ಸಮುದಾಯದಲ್ಲಿರುವ ವಿಷಯ ತಜ್ಞರನ್ನು ತರಗತಿಗೆ ಕರೆಸಿ ಅವರೊಡನೆ ಮಕ್ಕಳ ಸಂವಾದ ಏರ್ಪಡಿಸುತ್ತೇನೆ. | | | |
| 3 | ಸಮುದಾಯದ ವಿವಿಧ ಕಾರ್ಯಕ್ರಮಗಳಲ್ಲಿ ನಾನೂ ಭಾಗವಹಿಸುತ್ತೇನೆ. | | | |
| 4 | ಎಲ್ಲ ಮಕ್ಕಳೂ ಭಾಗವಹಿಸಲು ಅನುಕೂಲವಾಗುವಂತಹ ಚಟುವಟಿಕೆಗಳನ್ನು ಸಂಘಟಿಸುತ್ತೇನೆ. | | | |
| 5 | ನನ್ನ ಪ್ರತಿ ತರಗತಿಯಲ್ಲಿಯೂ ಒಂದಲ್ಲ ಒಂದು ರೀತಿಯ ಗುಂಪು ಚಟುವಟಿಕೆ ಇರುತ್ತದೆ. | | | |
| 6 | ನನ್ನ ತರಗತಿಯಲ್ಲಿ ಮಕ್ಕಳು ಪರಸ್ಪರರೊಡನೆ ಚರ್ಚಿಸಲು, ನನ್ನೊಡನೆ ಚರ್ಚಿಸಲು ಅವಕಾಶಗಳಿರುತ್ತವೆ. | | | |
| 7 | ನನ್ನ ತರಗತಿಯಲ್ಲಿ ಮಕ್ಕಳು ಪ್ರಶ್ನೆಗಳನ್ನು ಕೇಳಲು ಮುಕ್ತ ಅವಕಾಶವಿದೆ. | | | |
| 8 | ನಾನು ಮಕ್ಕಳ ಪ್ರಶ್ನೆಗಳಿಗೆ ನೇರವಾಗಿ ಉತ್ತರಿಸುವುದರ ಬದಲಾಗಿ ಅವರೇ ಅವರ ಪ್ರಶ್ನೆಗಳ ಕುರಿತು ಯೋಚಿಸಿ ಉತ್ತರಗಳನ್ನು ಹುಡುಕಿಕೊಳ್ಳುವಂತೆ ಮಾಡುತ್ತೇನೆ. | | | |
| 9 | ನನ್ನ ತರಗತಿಯಲ್ಲಿ ಯಾವಾಗಲೂ ಒಂದು ಸೌಹಾರ್ದಯುತ ವಾತಾವರಣವಿರುತ್ತದೆ. | | | |
| 10 | ನನ್ನ ವಿದ್ಯಾರ್ಥಿಗಳು ಸದಾ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ. ನಾನು ಅದಕ್ಕೆ ಬೇಕಾದ ಮಾರ್ಗದರ್ಶನ ನೀಡುತ್ತೇನೆ. | | | |
| 11 | ನನಗೆ ಪ್ರತಿ ಮಗುವಿನ ಕೌಟುಂಬಿಕ ಹಾಗೂ ಸಾಮಾಜಿಕ ಹಿನ್ನೆಲೆ ತಿಳಿದಿದೆ.<br>ನಾನು ತರಗತಿ ಶಿಕ್ಷಕನಾಗಿರುವ/ಶಿಕ್ಷಕಿಯಾಗಿರುವ ತರಗತಿಯ | | | |

| | | | | |
|---|---|---|---|---|
| | ಪ್ರತಿ ಮಗುವಿಗೂ ಕೃತಿಸಂಪುಟ ನಿರ್ವಹಿಸುತ್ತೇನೆ. | | | |
| 12 | ಮಕ್ಕಳ ಪ್ರಗತಿ ವರದಿಯನ್ನು ತಯಾರಿಸುವಾಗ ಮಕ್ಕಳ ಕೃತಿ ಸಂಪುಟವನ್ನು ಆಧಾರವಾಗಿಟ್ಟುಕೊಳ್ಳುತ್ತೇನೆ. | | | |
| 13 | ನನಗೆ ಪಠ್ಯಕ್ರಮದ ನಿರೀಕ್ಷೆಗಳು ಹಾಗೂ ಆಶಯಗಳ ಪರಿಚಯವಿದೆ. | | | |
| 14 | ನಾನು ಪ್ರತಿ ಪಾಠಕ್ಕೂ ಸಾಕಷ್ಟು ಪೂರ್ವ ತಯಾರಿ ಮಾಡಿಕೊಳ್ಳುತ್ತೇನೆ. | | | |
| 15 | ಪಾಠದ ಆವಶ್ಯಕತೆಗಳಿಗನುಗುಣವಾದ ಬೋಧನಾ ಸಾಮಾಗ್ರಿ ತಯಾರಿಸಿ ಬಳಸುತ್ತೇನೆ. | | | |
| 16 | ನನ್ನ ಸಂವಹನ ಕೌಶಲಗಳು ಉತ್ತಮವಾಗಿವೆ ಎಂದು ನಾನು ಭಾವಿಸುತ್ತೇನೆ. | | | |
| 17 | ನನ್ನ ಮಾತುಗಳನ್ನು ಅರ್ಥೈಸಿಕೊಳ್ಳುವಲ್ಲಿ ನನ್ನ ವಿದ್ಯಾರ್ಥಿಗಳಿಗೆ ಸಮಸ್ಯೆಗಳು ಇರುವುದಿಲ್ಲ. | | | |
| 18 | ನಾನು ಬೋಧಿಸುವ ವಿಷಯಗಳ ಮೇಲೆ ನನಗೆ ಉತ್ತಮ ಪ್ರಭುತ್ವವಿದೆ. ಈ ವಿಷಯಗಳಿಗೆ ಸಂಬಂಧಿಸಿದಂತೆ ನಾನು ನನ್ನ ಜ್ಞಾನವನ್ನು ಸದಾ ಉನ್ನತೀಕರಿಸಿಕೊಳ್ಳಲು ಬೇಕಾದ ಅಧ್ಯಯನದಲ್ಲಿ ತೊಡಗಿಕೊಳ್ಳುತ್ತೇನೆ. | | | |
| 19 | ನಾನು ಬೋಧಿಸುವ ವಿಷಯಗಳಿಗೆ ಸಂಬಂಧಿಸಿದ ಆಕರ ಗ್ರಂಥಗಳು ನನ್ನಲ್ಲಿವೆ/ನನ್ನ ಶಾಲೆಯಲ್ಲಿವೆ/ನನಗೆ ಬೇಕಾದಾಗ ಲಭ್ಯವಿವೆ. | | | |
| 20 | ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವುದು ಶಾಲಾ ಶಿಕ್ಷಣದ ಅತಿ ಮುಖ್ಯ ಕಾಳಜಿ ಎಂದು ನಾನು ಭಾವಿಸುತ್ತೇನೆ, | | | |
| 21 | ಮಕ್ಕಳ ಸಮಸ್ಯೆಗಳಿಗೆ ನಾನು ಸದಾ ಮಾನವೀಯ ನೆಲೆಯಲ್ಲಿ ಸ್ಪಂದಿಸುತ್ತೇನೆ. | | | |
| 22 | ಸಮುದಾಯದ ಸದಸ್ಯರೊಡನೆ ಸಂವಾದ ನಡೆಸುವಾಗ ಮಕ್ಕಳ ಕಲಿಕೆಯ ಕುರಿತಾದ ವಿಷಯಗಳನ್ನು ಅವರಲ್ಲಿ ಹಂಚಿಕೊಳ್ಳುತ್ತೇನೆ. | | | |
| 23 | ನಾನು ಮಕ್ಕಳಿಂದ, ಮುಖ್ಯಶಿಕ್ಷಕರಿಂದ ಹಾಗೂ ಸಹೋದ್ಯೋಗಿಗಳಿಂದ ಹಿಮ್ಮಾಹಿತಿ ಸ್ವೀಕರಿಸಿ ನನ್ನಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳುತ್ತೇನೆ. | | | |
| 24 | ನಾನು ಮಕ್ಕಳ ಕಲಿಕೆಯ ಮಟ್ಟಗಳಿಗೆ ಅನುಗುಣವಾದ ಚಟುವಟಿಕೆಗಳನ್ನು ಆಯೋಜಿಸುತ್ತೇನೆ. | | | |
| 25 | ನನ್ನ ತರಗತಿಯ ಪರಿಣಾಮಕತೆಯ ಬಗ್ಗೆ ನಾನು ಸದಾ ಅವಲೋಕಿಸಿಕೊಳ್ಳುತ್ತೇನೆ. ಅಗತ್ಯವಿದ್ದರೆ ಕ್ರಿಯಾ ಸಂಶೋಧನೆ ಕೈಗೊಳ್ಳುತ್ತೇನೆ. | | | |

## ನಿರ್ವಹಣಾ ಸೂಚಕಗಳ ನೇರದಲ್ಲಿ ಮುಖ್ಯ ಅಧ್ಯಾಪಕರು ಮಾಡಿಕೊಂಡ ಸ್ವಯಂ ಮೌಲ್ಯಮಾಪನ

**ಸೂಚನೆ :**

- ✓ ನಿಮ್ಮ ಮೌಲ್ಯಮಾಪನ ಪ್ರಾಮಾಣಿಕವಾಗಿರಲಿ ಇದು ನಿಮ್ಮ ವ್ಯಕ್ತಿತ್ವ ಮತ್ತು ವೃತ್ತಿ ಬೆಳವಣಿಗೆಗೆ ಮಾತ್ರ. ಇದನ್ನು ಆಧರಿಸಿ ಪ್ರಶಂಸೆ /ದಂಡನೆಯನ್ನು ನೀಡುವುದಿಲ್ಲ. ಈ ವಿವರವನ್ನು ಯಾರಿಗೂ ನೀಡಬಾರದು. ಆದರೆ ಉಸ್ತುವಾರಿದಾರರು ಕೇಳಿದಾಗ ತೋರಿಸಬೇಕು.
- ✓ ಉಸ್ತುವಾರಿ ಅಧಿಕಾರಿಗಳು ಇಲ್ಲಿನ ಮಾಹಿತಿ ಆಧಾರಿಸಿ ಬಹುಮಾನ / ದಂಡನೆಯನ್ನು ನೀಡತಕ್ಕದ್ದಲ್ಲ. ಒಂದು ವೇಳೆ ಬಳಸಿಕೊಂಡರೆ ಆ ಕ್ರಮವನ್ನು ಹಿರಿಯ ಅಧಿಕಾರಿ/ಕಛೇರಿಗಳು ಊರ್ಜಿತಗೊಳಸಕೂಡದು.
- ✓ ಐದು ಬಿಂದು ಶ್ರೇಣಿಯಲ್ಲಿ ಅಂಕಗಳನ್ನು ನೀಡುವುದು. ಅಂದರೆ 1. ಕನಿಷ್ಟ 2. ಸುಧಾರಿಸಬೇಕು; 3. ಪರವಾಗಿಲ್ಲ; 4 ಸಮಾಧಾನಕರ; 5. ಉತ್ತಮ. ಕೊರತೆಯಾದ ಕ್ಷೇತ್ರಗಳಲ್ಲಿ ಹೆಚ್ಚಿನ ಪರಿಶ್ರಮ ಹಾಕುವುದು.
- ✓ ಉಸ್ತುವಾರಿದಾರರು (ಮುಖ್ಯೋಪಾಧ್ಯಾಯರು, ಸಿ.ಆರ್.ಪಿ ಮತ್ತು ಇತರೆ) ಸ್ವಮೌಲ್ಯ ಮಾಪನ ದಾಖಲೆ ಪರಿಶೀಲಿಸಿ ಸೂಕ್ತ ಹಿಮ್ಮಾಹಿತಿ ನೀಡುವುದು. ಹೀಯಾಳಿಸದೆ–ಕೊರತೆಯ ಕ್ಷೇತ್ರಗಳನ್ನು ಅವರ ಗಮನಕ್ಕೆ ತರುವುದು.
- ✓ ಪ್ರತಿ ತ್ರೈಮಾಸಿಕದಲ್ಲಿ ಪ್ರತಿ ಶಿಕ್ಷಕರು ಈ ನಮೂನೆಯಲ್ಲಿ ಸ್ವಮೌಲ್ಯಮಾಪನ ಮಾಡಿಕೊಂಡು ತಮ್ಮಲ್ಲಿ ಆಗುತ್ತಿರುವ ಬದಲಾವಣೆಯನ್ನು ಗುರುತಿಸಿಕೊಳ್ಳುವುದು.

**ಮುಖ್ಯೋಪಾಧ್ಯಾಪಕರ ಹೆಸರು ---------------------------ಸಲ್ಲಿಸಿದ ಸೇವೆ (ವರ್ಷಗಳಲ್ಲಿ) -----
---------ಮೌಲ್ಯಮಾಪನ ವರ್ಷ**

| ಕ್ರ ಸಂ | ಐಟಂಗಳು | ಸೆಪ್ಟೆಂಬರ್ | ಡಿಸೆಂಬರ್ | ಮಾರ್ಚ್ |
|---|---|---|---|---|
| 1 | ನನ್ನ ಶಾಲೆ ಯಾವ ರೀತಿಯ ಶಾಲೆಯಾಗಿರಬೇಕೆಂಬ ಬಗ್ಗೆ ನನಗೆ ಸ್ಪಷ್ಟ ಕಾಣ್ಕೆ ಇದೆ. | | | |
| 2 | ಶಾಲೆಯ ಕುರಿತಂತಹ ನನ್ನ ಕಾಣ್ಕೆಯನ್ನು ಎಲ್ಲ ವಾರಸುದಾರರೊಡನೆ ಹಂಚಿಕೊಳ್ಳುತ್ತೇನೆ. | | | |
| 3 | ಶಾಲಾಭಿವೃದ್ಧಿ ಯೋಜನೆಯನ್ನು ಎಲ್ಲ ವಾರಸುದಾರರ ಸಹಭಾಗಿತ್ವದಲ್ಲಿ ಮಕ್ಕಳ ದೃಷ್ಟಿಕೋನದಿಂದ ಹಾಕಿಕೊಳ್ಳಲಾಗುತ್ತದೆ. | | | |
| 4 | ಕಾರ್ಯಕ್ರಮಗಳನ್ನು ಆಯೋಜಿಸುವಾಗ ಎಲ್ಲ ಸಹಭಾಗಿಗಳಿಗೆ ಒಪ್ಪಿಗೆಯಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳಲಾಗುತ್ತದೆ. | | | |
| 5 | ಶಿಕ್ಷಕರ ವೃತ್ತಿಪರ ಬೆಳೆವಣಿಗೆಗೆ ಪೂರಕವಾಗಿರುವ ಸಂವಾದ, ಚರ್ಚೆಗಳನ್ನು ನಡೆಸಲು ಅವಕಾಶ ಮಾಡಿರುತ್ತೇನೆ. | | | |
| 6 | ಪ್ರತಿ ತಿಂಗಳೂ ಶಿಕ್ಷಕರ ಸಭೆ ನಡೆಸುತ್ತೇನೆ. ಈ ಸಭೆಯಲ್ಲಿ ಶಿಕ್ಷಕರಿಗೆ ವಿವಿಧ ತರಗತಿ ಪ್ರಕ್ರಿಯೆಗಳ ಬಗೆಗೆ ಅಗತ್ಯ ಮಾರ್ಗದರ್ಶನ ನೀಡುತ್ತೇನೆ. | | | |
| 7 | ನಾನು ಮಕ್ಕಳಿಂದ, ಸಹೋದ್ಯೋಗಿಗಳಿಂದ ಹಾಗೂ ಪೋಷಕರಿಂದ ಸಿಗುವ ಹಿಮ್ಮಾಹಿತಿಯನ್ನು ಮುಕ್ತವಾಗಿ ಸ್ವೀಕರಿಸುತ್ತೇನೆ ಹಾಗೂ ನನ್ನ ಆಚರಣೆಗಳಲ್ಲಿ ಅಗತ್ಯ ಬದಲಾವಣೆಗಳನ್ನು ಮಾಡಿಕೊಳ್ಳುತ್ತೇನೆ. | | | |
| 8 | ಸಮುದಾಯದಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಶಾಲೆಯನ್ನು ಒಂದು ಉತ್ತಮ ಸಂಪನ್ಮೂಲ ಕೇಂದ್ರವಾಗಿ ಮಾಡಿರುತ್ತೇನೆ. | | | |
| 9 | ಪ್ರತಿ ತಿಂಗಳಿನಲ್ಲಿ ಎಲ್ಲಾ ಶಿಕ್ಷಕರ ಕನಿಷ್ಠ ಒಂದು ತರಗತಿಗಳನ್ನು ಸಂಪೂರ್ಣವಾಗಿ ವೀಕ್ಷಿಸಿ ಅವರಿಗೆ ಹಿಮ್ಮಾಹಿತಿ ನೀಡುತ್ತೇನೆ. | | | |
| 10 | ನಾನು ಶಾಲೆ ಆರಂಭವಾಗುವುದಕ್ಕೆ ಅರ್ಧ ಗಂಟೆ ಮುಂಚಿತವಾಗಿ ಶಾಲೆಗೆ ಬರುತ್ತೇನೆ ಹಾಗೂ ಶಾಲೆಯ ಅವಧಿ ಮುಗಿದು ಎಲ್ಲರೂ ಮನೆಗೆ ತೆರಳಿದ ಬಳಿಕವೇ ತೆರಳುತ್ತೇನೆ. | | | |
| 11 | ನಾನು ದೈನಂದಿನ ಅಸೆಂಬ್ಲಿಗೆ ತಪ್ಪದೇ ಹಾಜರಾಗುತ್ತೇನೆ. | | | |
| 12 | ನನ್ನ ಶಾಲೆಯ ಎಲ್ಲ ಶಿಕ್ಷಕರೂ ಸಮಯಕ್ಕೆ ಸರಿಯಾಗಿ ಶಾಲೆಗೆ ಬರುತ್ತಾರೆ. | | | |
| 13 | ಪ್ರತಿ ತಿಂಗಳೂ ಶಾಲೆಯಲ್ಲಿ ಎಸ್ ಡಿ ಎಂ ಸಿ ಸಭೆ ಕರೆಯುತ್ತೇನೆ ಹಾಗೂ ಆ ಸಭೆಯಲ್ಲಿ ಅತಿ ಹೆಚ್ಚು ಸದಸ್ಯರು ಭಾಗವಹಿಸುವಂತೆ ಕ್ರಮ ಕೈಗೊಳ್ಳುತ್ತೇನೆ. | | | |

| | | | | |
|---|---|---|---|---|
| 14 | ಶಾಲೆಯ ಎಲ್ಲ ಕಾರ್ಯಕ್ರಮಗಳಿಗೂ ಸಮುದಾಯದ ಸದಸ್ಯರನ್ನು ಆಹ್ವಾನಿಸುತ್ತೇನೆ. | | | |
| 15 | ಸಮುದಾಯದ ಸದಸ್ಯರು ಶಾಲೆಗೆ ಬಂದಾಗ ನಾನು ಅವರನ್ನು ಸದಾ ಸ್ವಾಗತಿಸುತ್ತೇನೆ ಹಾಗೂ ಅವರೊಡನೆ ಶಾಲೆಯ ಕುರಿತಂತೆ ಚರ್ಚಿಸುತ್ತೇನೆ. | | | |
| 16 | ಬಿಸಿಯೂಟ ಬಡಿಸುವುದನ್ನು ನಾನು ಸ್ವತ: ಮೇಲುಸ್ತುವಾರಿ ಮಾಡುತ್ತೇನೆ. ನಾನು ಕೂಡಾ ಮಕ್ಕಳೊಂದಿಗೇ ಊಟ ಮಾಡುತ್ತೇನೆ. | | | |
| 17 | ನನ್ನ ಶಾಲೆಯ ಪರಿಸರವು ಸ್ವಚ್ಛವಾಗಿರುವುದನ್ನು ಸದಾ ಖಚಿತಪಡಿಸಿಕೊಳ್ಳುತ್ತೇನೆ. | | | |
| 18 | ನನ್ನ ಶಾಲೆಯಲ್ಲಿ ಉತ್ತಮ ಕುಡಿಯುವ ನೀರಿನ ವ್ಯವಸ್ಥೆಯಿದೆ, ಬೇಕಾದಷ್ಟು ಶೌಚಾಲಯಗಳಿದ್ದು ಅವನ್ನು ಸ್ವಚ್ಛವಾಗಿರಿಸಿಕೊಳ್ಳಲಾಗುತ್ತದೆ. | | | |
| 19 | ಕಲಿಕೆಯ ಸಮಸ್ಯೆಯಿರುವ ನಿಧಾನಗತಿಯ ಮಕ್ಕಳನ್ನು ಗುರುತಿಸಿ ಅವರಿಗೆ ವಿಶೇಷ ತರಬೇತಿ ನೀಡುವ ವ್ಯವಸ್ಥೆ ಮಾಡಿರುತ್ತೇನೆ. | | | |
| 20 | ಶಾಲೆಯಲ್ಲಿ ಪ್ರತಿವಾರವೂ ಯಾವುದಾದರೊಂದು ಸಹಪಠ್ಯ ಚಟುವಟಿಕೆ ಸಂಘಟಿಸುವ ವ್ಯವಸ್ಥೆ ಮಾಡಿರುತ್ತೇನೆ. | | | |
| 21 | ಶಾಲೆಯ ಶೈಕ್ಷಣಿಕ ಯೋಜನೆಯ ಅನುಷ್ಠಾನವನ್ನು ಸದಾ ಅನುಪಾಲನೆ ಮಾಡುತ್ತಿರುತ್ತೇನೆ. | | | |
| 22 | ಶಾಲಾ ಕೆಲಸಗಳಿಗೆ ಸಂಬಂಧಿಸಿದ ಜವಾಬ್ದಾರಿಗಳನ್ನು ಎಲ್ಲರಿಗೂ ಹಂಚಿಕೊಟ್ಟಿರುತ್ತೇನೆ. | | | |
| 23 | ಶಿಕ್ಷಕರ ನಿರ್ಧಾರಗಳನ್ನು ನಾನು ಗೌರವಿಸುತ್ತೇನೆ. ಅವರು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದಲ್ಲಿ ಮಾತ್ರ ನಾನು ಮಾರ್ಗದರ್ಶನ ನೀಡುತ್ತೇನೆ. | | | |
| 24 | ನನ್ನ ಶಾಲೆಯ ಎಲ್ಲ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ತಮ್ಮ ತಮ್ಮ ಕೆಲಸಗಳನ್ನು ತಾವೇ ಜವಾಬ್ದಾರಿಯಿಂದ ನಿರ್ವಹಿಸಬಲ್ಲರು ಎಂಬ ನಂಬಿಕೆ ನನಗಿದೆ. ಅದಕ್ಕೆ ಬೇಕಾದ ಮಾರ್ಗದರ್ಶನವನ್ನು ನಾನು ನೀಡಿರುತ್ತೇನೆ. | | | |
| 25 | ಶಾಲೆಯು ಇಲಾಖೆಗೆ ಸಲ್ಲಿಸಬೇಕಾಗಿರುವ ಎಲ್ಲ ಮಾಹಿತಿಯನ್ನು ನಾನು ಕಾಲ ಕಾಲಕ್ಕೆ ಸಲ್ಲಿಸುತ್ತಿದ್ದೇನೆ, ಶಾಲೆಯ ಆಡಳಿತ ಕುರಿತಾದ ದಾಖಲೀಕರಣಗಳನ್ನು ನಿಯಮಿತವಾಗಿ ಮಾಡಲಾಗುತ್ತಿದೆ. | | | |
| 26 | ನಾನು ಕನಿಷ್ಟ ಮೂರು ತರಗತಿಗಳಿಗೆ ವಿಷಯ ಬೋಧನೆ ಮಾಡುತ್ತೇನೆ. ಅಂತೆಯೇ ಪ್ರತಿ ತಿಂಗಳೂ ಎಲ್ಲ ತರಗತಿಗಳಲ್ಲಿ ಕನಿಷ್ಟ ತಲಾ ಒಂದು ಅವಧಿಯಲ್ಲಿಯಾದರೂ ಮಕ್ಕಳೊಡನೆ ಅವರ ಕಲಿಕೆ ಕುರಿತಂತೆ ಸಂವಾದ ನಡೆಸುತ್ತೇನೆ. | | | |
| 27 | ಅಧ್ಯಾಪಕರು ಮಾಡಿದ ಘಟಕ ಪರೀಕ್ಷೆ /ಇತರ ಪರೀಕ್ಷೆಗಳಲ್ಲಿ ಮಕ್ಕಳು ಮಾಡಿದ ಸಾಧನೆಯನ್ನು ಪೋಷಕರೊಂದಿಗೆ ನಿಯಮಿತವಾಗಿ ಹಂಚಿಕೊಳ್ಳುವ ವ್ಯವಸ್ಥೆ ಮಾಡಿದೆ ಹಾಗೂ ಮೌಲ್ಯಮಾಪನವನ್ನು ಅವಲೋಕಿಸುತ್ತೇವೆ. | | | |
| 28 | ಅಧ್ಯಾಪಕರು ಮಾಡಿದ ಪಾಠದ ತಯಾರಿ, ಕಲಿಕಾ ಸಾಮಗ್ರಿ ಪರಿಶೀಲಿಸಿ ಹಿಮ್ಮಾಹಿತಿ ನೀಡುವೆ. | | | |
| 29 | ಶಾಲೆಯ ಎಲ್ಲಾ ಯೋಜನೆಗಳನ್ನು ತಯಾರಿಸಿದ್ದು ಅದನ್ನು ಅನುಷ್ಠಾನಕ್ಕೆ ತರುತ್ತಿರುವೆ. | | | |
| 30 | ಶಾಲಾ ದಾಖಲೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವೆ | | | |
| 31 | ಹಣಕಾಸಿನ ವ್ಯವಹಾರದಲ್ಲಿ ಪಾರದರ್ಶಕತೆಯನ್ನು ಕಾಯ್ದುಕೊಂಡಿರುವೆ | | | |
| 32 | ನನ್ನ ವಿದ್ಯಾರ್ಥಿಗಳು ಕನಿಷ್ಠ ಪ್ರತಿಶತ ೬೦ಕ್ಕಿಂತ ಹೆಚ್ಚು ಕಲಿಕೆಯ ಸಾಧನೆ ಮಾಡಿದ್ದಾರೆ. | | | |
| 33 | ನನ್ನ ಶಾಲೆಯ ವಿದ್ಯಾರ್ಥಿಗಳು ಬೇರೆಡೆ ಹೋದಾಗ ನನ್ನ ಶಾಲೆಯ ಘನತೆಯನ್ನು ಎತ್ತಿ ಹಿಡಿಯುತ್ತಾರೆ ಎಂಬ ಭರವಸೆ ನನಗಿದೆ. | | | |

## 3 ನೇ ತರಗತಿ – ಮೌಲ್ಯಮಾಪನ ಸಾಧನಗಳು

| ಕ್ರ ಸಂ | ಕಲಿಕೆಯ ಸೂಚಕಗಳು | ಮೌಲ್ಯಮಾಪನದ ವಿಧಾನಗಳು / ಬಳಸಬಹುದಾದ ಚಟುವಟಿಕೆಗಳು |
|---|---|---|
| 1 | 95% ಕ್ಕೆ ಕಡಿಮೆಯಿಲ್ಲದಷ್ಟು ಹಾಜರಾತಿ ಹೊಂದಿರುತ್ತಾರೆ<br>ಹಾಜರಾತಿ ವಹಿ ನೋಡಿ ತಿಳಿಯುವುದು | ಹಾಜಾರಾತಿ ವಹಿಯನ್ನು ಆಧರಿಸಿ ಭೇಟಿಯ ದಿನದ ವರೆಗಿನ ಶಾಲಾ ದಿನಗಳು ಮತ್ತು ಮಕ್ಕಳು ಹಾಜರಾದ ದಿನಗಳನ್ನು ಗುರುತಿಸಿಕೊಂಡು ಹಾಜರಾತಿಯ ಶೇಕಡಾ ಪ್ರಮಾಣ ತಿಳಿಯುವುದು. |
| 2 | ಇತರ ವಿದ್ಯಾರ್ಥಿಗಳೊಂದಿಗೆ ಸ್ನೇಹಮಯ ಸಂಬಂಧ ಹೊಂದಿರುತ್ತಾರೆ.<br>ಅವಲೋಕನ ಮಾತ್ರ | ಆಟದ ಬಯಲಿನಲ್ಲಿ, ಬಿಸಿಯೂಟದ ಸಂದರ್ಭಗಳಲ್ಲಿ ಮಕ್ಕಳನ್ನು ಗಮನಿಸಿ ತಿಳಿಯುವುದು. ಗುಂಪು ಕಾರ್ಯ ಕೊಟ್ಟಿದ್ದಾಗ ಕೂಡಾ ತಿಳಿಯಬಹುದು. |
| 3 | ಶಿಕ್ಷಕರು ಮತ್ತು ಸ್ನೇಹಿತರ ಮಾತುಗಳನ್ನು ಆಲಿಸಿ ಅರ್ಥೈಸಿಕೊಳ್ಳುತ್ತಾರೆ.<br>ಅವಲೋಕನ, ಸಂದರ್ಶನ | ತರಗತಿ ಅವಲೋಕನದ ಸಂದರ್ಭದಲ್ಲಿ, ಗುಂಪು ಚಟುವಟಿಕೆ ನಡೆಸುವಾಗ, ಶಿಕ್ಷಕರು ಪಾಠಮಾಡುವಾಗ ಕೇಳುವ ಪ್ರಶ್ನೆಗಳಿಗೆ ಸ್ಪಂದಿಸುವ ರೀತಿಯಿಂದ ತಿಳಿಯಬಹುದು. ನಾವೇ ಒಂದು ಚಿಕ್ಕ ಘಟನೆ, ಕಥೆ ಹೇಳಿ ಬಳಿಕ ಪ್ರಶ್ನೆಗಳನ್ನು ಕೇಳಿ ಅವರ ಅರ್ಥೈಸಿಕೊಳ್ಳುವಿಕೆಯನ್ನು ಮೌಲ್ಯಮಾಪನ ಮಾಡಬಹುದು. |
| 4 | ವಿವಿಧ ಸಂದರ್ಭಗಳಲ್ಲಿ ನಿರೀಕ್ಷೆಯಂತೆ ಸ್ಪಂದಿಸುತ್ತಾರೆ.<br><br>ಅವಲೋಕನ | ಮಕ್ಕಳು ಸೂಚನೆಗಳನ್ನು ಪಾಲಿಸುತ್ತಾರೆಯೇ, ತರಗತಿ ಸಂದರ್ಭದಲ್ಲಿ ಚಟುವಟಿಕೆಗಳು ಬದಲಾದಾಗ ಅವುಗಳಿಗೆ ಬೇಕಾದಂತೆ ತಾವೂ ತೊಡಗಿಕೊಳ್ಳುತ್ತಾರೆಯೇ ಎಂದು ಗಮನಿಸುವುದು.<br>ಪ್ರತಿ ಸಂದರ್ಭಕ್ಕೂ ಒಂದು ನಿರೀಕ್ಷೆ ಇರುತ್ತದೆ. ಪ್ರತಿ ಸಂದರ್ಭದ ನಿರೀಕ್ಷೆಯನ್ನು ನಾವು ಮೊದಲಿಗೆ ಅರ್ಥ ಮಾಡಿಕೊಂಡು ವಿದ್ಯಾರ್ಥಿಗಳು ಆ ನಿರೀಕ್ಷೆಯಂತೆ ಸ್ಪಂದಿಸುತ್ತಾರೆಯೇ ಎಂದು ತಿಳಿಯಬಹುದು. |
| 5 | ಸರಳ ಕಥೆಗಳನ್ನು ಹೇಳುವುದರಲ್ಲಿ ಆಸಕ್ತಿ ತೋರಿಸುತ್ತಾರೆ, ಹೇಳುತ್ತಾರೆ<br>ಸಂದರ್ಶನ, ಇಡಿ ತರಗತಿ ಚಟುವಟಿಕೆ | ಮಕ್ಕಳಿಗೆ ಕಥೆಗಳನ್ನು ಹೇಳಲು ತಿಳಿಸಬಹುದು. ಸಂದರ್ಶನದ ಅವಧಿಯಲ್ಲಿ ಅವರಿಗೆ ಯಾವ ಕಥೆಗಳು ತಿಳಿದಿವೆ, ಹೇಳಬಲ್ಲರು ಎಂದು ತಿಳಿಬಹುದು. ಚಿಕ್ಕ ಕಥೆಗಳನ್ನು ಹೇಳಲು ತಿಳಿಸಬಹುದು. |
| 6 | ತರಗತಿ ಮತ್ತು ಶಾಲೆಯಲ್ಲಿ ಸಂಘಟಿಸುವ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.<br>ಇಡೀ ತರಗತಿಯೊಡನೆ ಸಂಭಾಷಣೆ<br>ದಾಖಲೆಗಳಿದ್ದರೆ ಪರಿಶೀಲಿಸುವುದು<br>ಇಡೀ ಗುಂಪು ಜೊತೆ ಚರ್ಚೆ, ಸಂದರ್ಶನ | ತರಗತಿಯೊಡನೆ ಒಂದು ಸಂಭಾಷಣೆ ಕೈಗೊಂಡು ಯಾರು ಯಾವ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ಎಂದು ತಿಳಿಯಬಹುದು. ಯಾವ ಚಟುವಟಿಕೆಯಲ್ಲಿಯೂ ಭಾಗವಹಿಸದವರು ಎಷ್ಟು ಮಂದಿ ಇದ್ದಾರೆ ಎಂದು ತಿಳಿಯುವುದು. ಒಟ್ಟಾರೆ ಮಕ್ಕಳ ಭಾಗವಹಿಸುವಿಕೆ ಶೇ 80 ಕ್ಕಿಂತ ಜಾಸ್ತಿ ಇದ್ದರೆ ಮಕ್ಕಳಿಗೆ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶಗಳು ಸಿಗುತ್ತಿವೆ ಎಂದು ಭಾವಿಸಬಹುದು. |
| 7 | ಹಿರಿಯರಿಗೆ ಗೌರವ ತೋರಿಸುತ್ತಾರೆ.<br>ಅವಲೋಕನ, ಸಂದರ್ಶನ | ಶಿಕ್ಷಕರೊಡನೆ ಅಥವಾ ತರಗತಿಗೆ ನೀವು ಪ್ರವೇಶಿಸಿದಾಗ ಮಕ್ಕಳು ವರ್ತಿಸುವ ರೀತಿಯಲ್ಲಿ ತಿಳಿಯಬಹುದು. ಸಂದರ್ಶನದ ವೇಳೆ ಮನೆಮಂದಿಯ ಕುರಿತಂತೆ, ಹಿರಿಯರ ಕುರಿತಂತೆ ಪ್ರಶ್ನೆಗಳನ್ನು ಕೇಳುವುದರ ಮೂಲಕ ಹಿರಿಯರ ಕುರಿತಂತೆ ಅವರ ಧೋರಣೆಗಳನ್ನು ತಿಳಿಯಬಹುದು. ಮಕ್ಕಳ ಒಟ್ಟಾರೆ ವರ್ತನೆಯ ಬಗ್ಗೆ ಶಿಕ್ಷಕರ ಜೊತೆ ಚರ್ಚಿಸಬಹುದು.<br>ಉದಾ: ನಿನ್ನ ತಾಯಿಗೆ ನೀನು ಮನೆಕೆಲಸಗಳಲ್ಲಿ ಸಹಾಯ ಮಾಡ್ತೀಯಾ?<br>ತಾಯಿ ನಿನಗೆ ಸದಾ ಹೇಳುತ್ತಿರುವ ಒಂದು ಮಾತು ಹೇಳ್ತಿಯಾ?<br>ನೀನು ಅದನ್ನು ಪಾಲಿಸ್ತಾ ಇದ್ದೀಯಾ? |
| 8 | ಕನ್ನಡದಲ್ಲಿ ಸರಳ ಪಠ್ಯಗಳನ್ನು ಓದುತ್ತಾರೆ.<br>ಓದಿಸುವ ಚಟುವಟಿಕೆ | ಸಂದರ್ಶನದ ವೇಳೆ ಮಕ್ಕಳಿಂದ ಓದಿಸಬಹುದು. ತರಗತಿ ಅವಲೋಕನದ ಸಂದರ್ಭದಲ್ಲಿಯೂ ಅವರ ಓದುವಿಕೆ ಗಮನಿಸಬಹುದು. |
| 9 | ಕನ್ನಡವನ್ನು ಓದಲು ಸಾಧ್ಯವಾಗುವಂತೆ ಬರೆಯುತ್ತಾರೆ.<br>ಬರೆಯುವ ಚಟುವಟಿಕೆ | ಒಂದು ಪ್ಯಾರಾಗ್ರಾಫ್ ಉಕ್ತಲೇಖನ ನೀಡುವುದು.<br>ಒಂದು ಪ್ಯಾರಾಗ್ರಾಫ್ ನಕಲು ಮಾಡಲು ಹೇಳುವುದು<br>ಮಕ್ಕಳ ನೋಟ್ ಪುಸ್ತಕಗಳನ್ನು ಗಮನಿಸುವುದು.<br>ಮಕ್ಕಳಿಂದ ಒಂದು ಚಿಕ್ಕ ಕಥೆ ಬರೆಸುವುದು. ಅವರಿಗೆ ತಿಳಿದ ಕಥೆಯನ್ನು ಬರೆಯಲು ಹೇಳಬಹುದು. |

| | | |
|---|---|---|
| 10 | ಇಂಗ್ಲಿಷಿನ ಸರಳ ಸಂಭಾಷಣೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ.<br>ಇಡೀ ಗುಂಪು ಚರ್ಚೆ, ಸಂದರ್ಶನ | ಮಕ್ಕಳೊಡನೆ ಸಂಭಾಷಣೆಯಲ್ಲಿ ತೊಡಗುವುದು. ಇಡೀ ಗುಂಪಿನ ಜೊತೆಗೂ ಸಂಭಾಷಣೆ ನಡೆಸಬಹುದು. ಸಂದರ್ಶನದ ಸಂದರ್ಭವೂ ಇಂಗ್ಲಿಷ್ ನಲ್ಲಿಯೇ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯಬಹುದು. ಅವರು ಇಂಗ್ಲಿಷ್ ನಲ್ಲಿ ಉತ್ತರಿಸದಿದ್ದರೂ ನಿಮ್ಮ ಪ್ರಶ್ನೆ ಅರ್ಥ ಮಾಡಿಕೊಂಡಿದ್ದಾರೆಯೇ ಎಂದು ಕನ್ನಡದಲ್ಲಿ ಪ್ರಶ್ನೆ ಕೇಳುವ ಮೂಲಕ ತಿಳಿಯಬಹುದು.<br>ಯಾವುದಾದರೊಂದು ಕಥೆಯ ಸಂಭಾಷಣೆಯನ್ನು ಹೇಳಿ ಅದರ ಸಂದರ್ಭ ಕೇಳಬಹುದು. |
| 11 | ಮೂರಂಕಿ ಸಂಖ್ಯೆಗಳನ್ನು ಬಳಸಿ ಗಣಿತದ ಮೂಲಕ್ರಿಯೆಗಳನ್ನು ಮಾಡುತ್ತಾರೆ.<br>ಲೆಕ್ಕಗಳನ್ನು ನೀಡುವುದು | ಮೂರಂಕಿ ಸಂಖ್ಯೆಗಳನ್ನೊಳಗೊಂಡ ಲೆಕ್ಕಗಳನ್ನು ನೀಡುವುದು. ಕರಿಹಲಗೆ ಮೇಲೆ ಬರೆಯಬಹುದು. ಮಕ್ಕಳು ಲೆಕ್ಕಗಳನ್ನು ಮಾಡುವಾಗಲೇ ಗಮನಿಸುತ್ತಿದ್ದರೆ ಅವರಿಗೆ ಎಷ್ಟರ ಮಟ್ಟಿಗೆ ಲೆಕ್ಕಗಳನ್ನು ಮಾಡಬಲ್ಲರು ಎಂದು ತಿಳಿಯಬಹುದು. |
| 12 | ಸಜೀವಿಗಳನ್ನು ಮತ್ತು ನಿರ್ಜೀವಿ ವಸ್ತುಗಳನ್ನು ಗುರುತಿಸಬಲ್ಲರು.<br>ಚಟುವಟಿಕೆ | ಸಜೀವಿ ಮತ್ತು ನಿರ್ಜೀವಿಗಳನ್ನು ಪಟ್ಟಿ ಮಾಡಲು ಹೇಳುವುದು. ಉದಾಹರಣೆಗಳನ್ನು ನೀಡಿ ಸಜೀವಿ ಮತ್ತು ನಿರ್ಜೀವಿಗಳನ್ನು ಗುರುತಿಸಲು ಹೇಳುವುದು. |
| 13 | ವೈಯಕ್ತಿಕ ಸ್ವಚ್ಛತೆ, ಅರಿವಿದ್ದು ಶಾಲೆಯ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುತ್ತಾರೆ.<br>ಗಮನಿಸುವುದು, ಸಂದರ್ಶನ<br>ಬಿಸಿಯೂಟದ ಸಂದರ್ಭದಲ್ಲಿ ಗಮನಿಸಬಹುದು. | ಪ್ರತಿ ಮಗುವನ್ನೂ ವೈಯಕ್ತಿಕವಾಗಿ ಗಮನಿಸುವುದು – ಉಗುರುಗಳನ್ನು ಕತ್ತರಿಸಿದ್ದಾರೆಯೇ, ತಲೆ ಬಾಚುತ್ತಿದ್ದಾರೆಯೇ, ಬಟ್ಟೆಗಳು ಸ್ವಚ್ಛವಾಗಿವೆಯೇ, ಹಲ್ಲುಗಳನ್ನು ಸ್ವಚ್ಛವಾಗಿಟ್ಟುಕೊಂಡಿದ್ದಾರೆಯೇ ಎಂದು ಗಮನಿಸುವುದು. ಅಗತ್ಯವಿದ್ದರೆ ಸಂದರ್ಶನದ ವೇಳೆ ಅವರ ಅಭ್ಯಾಸಗಳ ಬಗ್ಗೆ ಪ್ರಶ್ನೆಗಳನ್ನೂ ಕೇಳಬಹುದು.<br>ಶಾಲೆಯ ಸುತ್ತಲಿನ, ತರಗತಿ ಸ್ವಚ್ಛತೆ ಗಮನಿಸುವುದು. |
| 14 | ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳ ವ್ಯತ್ಯಾಸ ತಿಳಿದಿರುತ್ತಾರೆ.<br>ಚಟುವಟಿಕೆ | ಪಟ್ಟಿ ಮಾಡಲು ಹೇಳುವುದು. ಉದಾಹರಣೆಗಳನ್ನು ನೀಡಿ ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳನ್ನು ಗುರುತಿಸಲು ಹೇಳುವುದು. |

**ಮೂರನೆಯ ತರಗತಿಯ ಮಕ್ಕಳ ಪ್ರಗತಿ ತಿಳಿಯಲು ಮುಖ್ಯವಾಗಿ ನಾಲ್ಕು ರೀತಿಗಳಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬಹುದು.**

1. ಇಡೀ ಗುಂಪಿನೊಡನೆ ನಡೆಸಬಹುದಾದ ಚಟುವಟಿಕೆಗಳು
    - ಮಕ್ಕಳು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ನಡೆಯುವ ಸಂಭಾಷಣೆಗಳನ್ನು ಅರ್ಥ ಮಾಡಿಕೊಳ್ಳಬಲ್ಲರೇ ಎಂದು ತಿಳಿಯಬಹುದು.
    - ಉಕ್ತಲೇಖನ ನೀಡುವುದು, ಲೆಕ್ಕಗಳನ್ನು ನೀಡುವುದು
2. ಗಮನಿಸುವುದು
    - ಸ್ವಚ್ಛತೆ, ಇತರರಿಗೆ ಸ್ಪಂದಿಸುವ ರೀತಿ, ಸ್ನೇಹಿತರೊಡನೆ ವರ್ತನೆ, ಭಾಷೆಯನ್ನು ಬಳಸುವ ರೀತಿ
3. ಸಂದರ್ಶನ
    - ಕಥೆ ಹೇಳಿಸುವುದು, ಓದಿಸುವುದು, ಲೆಕ್ಕ ಮಾಡಿಸುವುದು, ಸಜೀವಿ ನಿರ್ಜೀವಿಗಳ ವ್ಯತ್ಯಾಸ ಕೇಳುವುದು, ಸಾರ್ವಜನಿಕ, ಖಾಸಗಿ ಆಸ್ತಿಗಳ ವ್ಯತ್ಯಾಸ ಕೇಳುವುದು,
4. ದಾಖಲೆಗಳ ಪರಿಶೀಲನೆ
    - ಹಾಜರಾತಿ ವಹಿ, ಮಕ್ಕಳ ನೋಟ್ಸ್ ಪುಸ್ತಕ – ಕೈಬರಹದ ಗುಣಮಟ್ಟ ತಿಳಿಯಲು

## 7ನೇ ತರಗತಿ

| ಕ್ರ ಸಂ | ಕಲಿಕೆಯ ಸೂಚಕಗಳು | ಮೌಲ್ಯಮಾಪನದ ವಿಧಾನಗಳು / ಬಳಸಬಹುದಾದ ಚಟುವಟಿಕೆಗಳು |
|---|---|---|
| 1 | ಸ್ವತಂತ್ರವಾಗಿ ಅಧ್ಯಯನದಲ್ಲಿ ತೊಡಗಿಕೊಳ್ಳುತ್ತಾರೆ.<br>ವೈಯಕ್ತಿಕ ಅಥವಾ ಇಡೀ ತರಗತಿ ಚಟುವಟಿಕೆ | ಮಕ್ಕಳು ಪ್ರಾಜೆಕ್ಟ್ ಕಾರ್ಯಗಳಲ್ಲಿ ಯಾವ ರೀತಿ ತೊಡಗಿಕೊಳ್ಳುತ್ತಾರೆ ಎಂದು ತಿಳಿಯುವುದು, ಯಾವ ಸ್ವಕಲಿಕೆಯ ಅಭ್ಯಾಸಗಳನ್ನು ಬೆಳೆಸಿಕೊಂಡಿದ್ದಾರೆ ಎಂದು ತಿಳಿಯುವುದು, ಪದಕೋಶ ನೋಡಿ ಅರ್ಥ ಹೇಳುವ ಚಟುವಟಿಕೆ ನೀಡಬಹುದು.ಈ ಕೆಳಗಿನ ಕಾರ್ಯಗಳನ್ನು ನೀಡಬಹುದು.<br>ಒಂದು ಪ್ಯಾರಾಗ್ರಾಫ್ ಓದಿ ಟಿಪ್ಪಣಿ ಮಾಡುವುದು<br>ಪದಕೋಶ ಬಳಸಿ ಹೊಸ ಪದಗಳ ಅರ್ಥ ತಿಳಿಯುವುದು<br>ತಮ್ಮ ಪಠ್ಯ ಪುಸ್ತಕವನ್ನು ಪರಾಮರ್ಶಿಸಿ ಪ್ರಶ್ನೆಗಳಿಗೆ ಉತ್ತರ ಹೇಳುವುದು<br>ಒಂದು ಪ್ರಾಜೆಕ್ಟ್ ಕಾರ್ಯ ನಿರ್ವಹಿಸಲು ಅವರು ಏನೇನು ಮಾಡಬೇಕಾಗುತ್ತದೆ ಎನ್ನುವುದನ್ನು ಹೇಳಿಸುವುದು<br>ಯಾವ ಮಾಹಿತಿ ಎಲ್ಲಿ ಪಡೆಯಬಹುದು ಎಂದು ಹೇಳಿಸುವುದು |
| 2 | ನೀಡಲಾದ ಪಠ್ಯವನ್ನು ತಮ್ಮದೇ ಆದ ಭಾಷೆಯಲ್ಲಿ ಮರುಸಂಘಟಿಸುತ್ತಾರೆ.<br>ವೈಯಕ್ತಿಕ ಅಥವಾ ಇಡೀ ತರಗತಿ ಚಟುವಟಿಕೆ | ಒಂದು ಪ್ಯಾರಾಗ್ರಾಫ್ ನೀಡಿ ಅದನ್ನು ಅವರದೇ ಭಾಷೆಯಲ್ಲಿ ಬರೆಯಲು ಹೇಳುವುದು.<br>ಒಂದು ಪ್ಯಾರಾಗ್ರಾಫ್, ಕಥೆ ಓದಿ ಹೇಳಿ ಅದನ್ನು ಅವರೇ ಬರೆಯಲು ಹೇಳುವುದು ಬಳಿಕ ಅದನ್ನು ಓದಿಸಿ ಮೌಲ್ಯಮಾಪನ ಮಾಡುವುದು |
| 3 | ಕನ್ನಡದಲ್ಲಿ ಅದುವರೆಗೂ ಓದದಿರುವ ಪಠ್ಯವನ್ನು ಓದಿ ಅರ್ಥೈಸಿಕೊಳ್ಳುತ್ತಾರೆ.<br>ವೈಯಕ್ತಿಕ ಅಥವಾ ಇಡೀ ತರಗತಿ ಚಟುವಟಿಕೆ | ಒಂದು ಕಥೆ, ಪ್ಯಾರಾ, ವೃತ್ತಪತ್ರಿಕೆಯ ವರದಿ ಓದಲು ನೀಡಬಹುದು. ಎಲ್ಲ ಮಕ್ಕಳಿಗೂ ಪ್ರತ್ಯೇಕವಾದ ವರದಿ ಓದಲು ನೀಡಬಹುದು. ಬಳಿಕ ಕೆಲವು ಮಕ್ಕಳಿಗೆ ಅವರು ಏನು ಓದು ಅರ್ಥಮಾಡಿಕೊಂಡಿದ್ದಾರೋ ಅದನ್ನು ಹೇಳಲು ತಿಳಿಸಬಹುದು. ಈ ಕುರಿತಂತೆ ಸಂದರ್ಶನದಲ್ಲಿಯೂ ಪ್ರಶ್ನೆಗಳನ್ನು ಕೇಳಬಹುದು.<br>ಸಾಧ್ಯವಾದರೆ ಒಂದು ಪ್ರಶ್ನೆಪತ್ರಿಕೆ ನೀಡಿ ಅದರಲ್ಲಿ ಓದಿ ಉತ್ತರಿಸುವ ಪ್ರಶ್ನೆ ಕೇಳಬಹುದು. |
| 4 | ಕನ್ನಡದಲ್ಲಿ ನೀಡಿದ ವಿಷಯದ ಮೇಲೆ ಒಂದು ಪ್ಯಾರಾಗ್ರಾಫ್ ಬರೆಯುತ್ತಾರೆ.<br>ಇಡೀ ತರಗತಿ ಚಟುವಟಿಕೆ | ವಿಷಯ ನೀಡಿ ಬರೆಸುವುದು. ಬರೆದದ್ದನ್ನು ಕೆಲವು ಮಕ್ಕಳಿಂದ ಓದಿಸಬಹುದು. ಬರೆಯಲು ಪ್ರತ್ಯೇಕ ಹಾಳೆ ನೀಡಿ ಎಲ್ಲರೂ ಬರೆದುದನ್ನು ಸಂಗ್ರಹಿಸಿ ಬಳಿಕ ಅವುಗಳನ್ನು ನೋಡಿ ಮೌಲ್ಯಮಾಪನ ಮಾಡಬಹುದು. |
| 5 | ಸರಳವಾದ ಇಂಗ್ಲಿಷ್‌ನಲ್ಲಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಸಬಲ್ಲರು.<br>ಸಂದರ್ಶನ | ಸಂದರ್ಶನದ ವೇಳೆ ಕೆಲವು ಪ್ರಶ್ನೆಗಳನ್ನು ಇಂಗ್ಲಿಷ್‌ನಲ್ಲಿಯೇ ಕೇಳಿ, ಉತ್ತರಗಳನ್ನು ಪಡೆದು ಮೌಲ್ಯಮಾಪನ ಮಾಡುವುದು. |
| 6 | ಗಣಿತದ ಮೂಲ ಪರಿಕಲ್ಪನೆಗಳನ್ನು ದೈನಂದಿನ ಸನ್ನಿವೇಶಗಳಿಗೆ ಅನ್ವಯಿಸಿಕೊಳ್ಳಬಲ್ಲರು.<br>ದೈನಂದಿನ ವ್ಯವಹಾರದ ಸಮಸ್ಯೆಗಳನ್ನು ಕೇಳುವುದು | ದೈನಂದಿನ ಸನ್ನಿವೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಮೊದಲೇ ತಯಾರಿಸಿಟ್ಟುಕೊಂಡು ಕೇಳುವುದು. ಇವು ಹೆಚ್ಚಾಗಿ ವಾಕ್ಯ ರೂಪದಲ್ಲಿರುವ ಸಮಸ್ಯೆಗಳಾಗಿರಬಹುದು. ಎಲ್ಲ ಮಕ್ಕಳೂ ಒಳಗೊಳ್ಳುವ ರೀತಿಯಲ್ಲಿ ಇಡೀ ತರಗತಿ ಜೊತೆಗೆ ಸಮಸ್ಯೆಗಳನ್ನು ಚರ್ಚಿಸಬಹುದು. |
| 7 | ನಿಜಾಂಶಗಳು ಹಾಗೂ ತಾರ್ಕಿಕ ಚಿಂತನೆಯ ಆಧಾರದಲ್ಲಿ ನಿರ್ಧಾರಗಳನ್ನು ಕೈಗೊಳ್ಳುತ್ತಾರೆ.<br>ಒಗಟುಗಳ ಬಳಕೆ | ಒಗಟುಗಳನ್ನು ನೀಡಿ ಮೌಲ್ಯಮಾಪನ ಮಾಡುವುದು. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಿರುವ ಒಗಟುಗಳನ್ನು ಮೊದಲೇ ಸಂಗ್ರಹಿಸಿಟ್ಟುಕೊಳ್ಳಬೇಕು.<br>ಉದಾ: ಒಂದು ನಾಯಿ, ಒಂದು ಕುರಿ ಹಾಗೂ ಒಂದು ಹುಲ್ಲಿನ ಕಂತೆಯನ್ನು ಒಬ್ಬ ರೈತ ಹೇಗೆ ಒಂದೇ ದೋಣಿಯಲ್ಲಿ ನದಿ ದಾಟಿಸುತ್ತಾನೆ? ಒಮ್ಮೆಗೆ ಇಬ್ಬರು ಮಾತ್ರ ದಾಟಬಹುದು. ನಾಯಿ, ಕುರಿ ಹಾಗೂ ಹುಲ್ಲು ಮತ್ತು ಕುರಿಗಳನ್ನು ಜೊತೆಯಾಗಿರಿಸಲು ಸಾಧ್ಯವಿಲ್ಲ. |
| 8 | ನೀಡಲಾದ ಪ್ರಾಜೆಕ್ಟ್ ಕೆಲಸವನ್ನು ನಿಗದಿತ ಅವಧಿಯಲ್ಲಿ ಮುಗಿಸುತ್ತಾರೆ.<br>ಚರ್ಚೆ, ದಾಖಲೆ ಪರಿಶೀಲನೆ | ಹಿಂದಿನ ಸೆಮಿಸ್ಟರ್ ಗಳ ಪ್ರಾಜೆಕ್ಟ್ ದಾಖಲೆಗಳ ಪರಿಶೀಲನೆ, ಶಿಕ್ಷಕರೊಡನೆ ಚರ್ಚೆ ಮೂಲಕ ತಿಳಿಯುವುದು<br>ವಿದ್ಯಾರ್ಥಿಗಳೊಡನೆ ಪ್ರಾಜೆಕ್ಟ್ ಮಾಡಿದ ಅನುಭವಗಳ ಕುರಿತು ಚರ್ಚಿಸುವುದು |

| | | |
|---|---|---|
| 9 | ಪರಿಸರ, ಸಮಾಜ ಹಾಗೂ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳ ಕುರಿತ ಚರ್ಚೆಯಲ್ಲಿ ತೊಡಗಿಕೊಳ್ಳುತ್ತಾರೆ.<br>ಗುಂಪುಚರ್ಚೆ, ಚರ್ಚಾಸ್ಪರ್ಧೆ | ಯಾವುದಾದರೊಂದು ವಿಷಯವನ್ನು ಇಡೀ ತರಗತಿಯ ಜೊತೆಗೆ ಚರ್ಚೆಗೆ ತೆಗೆದುಕೊಳ್ಳುವುದು. ಉದಾ: ಪ್ಲಾಸ್ಟಿಕ್ ಬಳಕೆ ನಿವಾರಿಸಲು ಸಾಧ್ಯವಿಲ್ಲ. ಚರ್ಚೆಯ ಅವಧಿಯಲ್ಲಿ ಸಾಧ್ಯವಾದಷ್ಟೂ ಹೆಚ್ಚು ಮಕ್ಕಳನ್ನು ತೊಡಗಿಸಿಕೊಳ್ಳುವುದು. ಮಕ್ಕಳ ನಿರ್ವಹಣೆಯ ಆಧಾರದಲ್ಲಿ ಮೌಲ್ಯಮಾಪನ ಮಾಡುವುದು |
| 10 | 7ನೇ ತರಗತಿಯವರೆಗೆ ವಿಜ್ಞಾನ ಗಣಿತ ಹಾಗೂ ಸಮಾಜ ವಿಜ್ಞಾನಗಳಲ್ಲಿ ಕಲಿತ ವಿವಿಧ ಪರಿಕಲ್ಪನೆಗಳ ಅರ್ಥೈಸಿಕೊಳ್ಳುವಿಕೆಯನ್ನು ತೋರಿಸುತ್ತಾರೆ.<br>ಸಂದರ್ಶನ<br>ಇಡೀ ತರಗತಿ ಚರ್ಚೆ | ಮಕ್ಕಳ ಪರೀಕ್ಷೆ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಿ ತಿಳಿಯುವುದು.<br>ನಿರ್ದಿಷ್ಟ ಪರಿಕಲ್ಪನೆಗಳನ್ನು ಗುರುತಿಸಿಕೊಂಡು ಅವುಗಳ ಮೇಲೆ ಇಡೀ ತರಗತಿಗೆ ಅಥವಾ ಸಂದರ್ಶನದ ವೇಳೆ ವೈಯಕ್ತಿಕವಾಗಿ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯುವುದು. ಪ್ರಶ್ನೆಗಳು ಅನ್ವಯ ರೂಪದಲ್ಲಿದ್ದರೆ ಉತ್ತಮ. |
| 11 | ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತಾರೆ.<br>ಸಂದರ್ಶನ | ಶಾಲೆಯ ದೈನಂದಿನ ಚಟುವಟಿಕೆಗಳಲ್ಲಿ ಯಾವ ವಿದ್ಯಾರ್ಥಿಗೆ ಯಾವ ಜವಾಬ್ದಾರಿ ಇದೆ ಎಂದು ತಿಳಿಯುವುದು.<br>ಈ ಬಗ್ಗೆ ಶಿಕ್ಷಕರ ಅಭಿಪ್ರಾಯ ತಿಳಿಯುವುದು.<br>ಮಕ್ಕಳು ಮನೆಯಲ್ಲಿ ಯಾವ ರೀತಿ ಜವಾಬ್ದಾರಿ ವಹಿಸಿಕೊಂಡಿದ್ದಾರೆ ಎಂದು ಸಂದರ್ಶನದಲ್ಲಿ ತಿಳಿಯುವುದು<br>ಒಂದು ಕಾಲ್ಪನಿಕ ಸಂದರ್ಭದಲ್ಲಿ ಯಾರು ಯಾವ ಜವಾಬ್ದಾರಿ ವಹಿಸಿಕೊಳ್ಳಲು ಇಚ್ಛಿಸುತ್ತಾರೆ ಎಂದು ಕೇಳಿ ತಿಳಿಯುವುದು.<br>ಉದಾ: ಶಾಲೆಯಲ್ಲಿ ಕ್ಲಸ್ಟರ್ ಮಟ್ಟದ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸುವುದು. |
| 12 | ತಮ್ಮ ಹಕ್ಕು ಹಾಗೂ ಕರ್ತವ್ಯಗಳನ್ನು ತಿಳಿದಿರುತ್ತಾರೆ.<br>ಸಂದರ್ಶನ | ನೇರ ಪ್ರಶ್ನೆಗಳ ಮೂಲಕ ಕೇಳಿ ತಿಳಿಯಬಹುದು.<br>ಕೆಲವು ಸಂದರ್ಭಗಳನ್ನು ನೀಡಿ ಅವರು ಆ ಸಂದರ್ಭಗಳಲ್ಲಿ ಯಾವ ರೀತಿ ವರ್ತಿಸುವರು ಎಂದು ಸಂದರ್ಶನದಲ್ಲಿ ಕೇಳುವುದು. |
| 13 | ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ಸಕಾರಾತ್ಮಕ ಮನೋಭಾವದೊಂದಿಗೆ ಪಾಲ್ಗೊಳ್ಳುವರು | ಆಟದ ಬಯಲಿನಲ್ಲಿ ಅವರ ವರ್ತನೆ ಗಮನಿಸಬಹುದು.<br>ತರಗತಿಯಲ್ಲಿ ನಡೆಸುವ ಚಟುವಟಿಕೆಗಳಲ್ಲಿ ಅವರು ಯಾವ ರೀತಿ ಭಾಗವಹಿಸುತ್ತಾರೆ ಎಂದು ಗಮನಿಸುವುದು.<br>ಶಿಕ್ಷಕರೊಡನೆ ಚರ್ಚಿಸಿ ತಿಳಿಯುವುದು. |
| 14 | ತಮ್ಮ ಸಂಸ್ಕೃತಿ, ನಾಡು, ನುಡಿಗಳನ್ನು ಗೌರವಿಸುತ್ತಾರೆ.<br>ಸಂದರ್ಶನ | ನಾಡು, ನುಡಿಗೆ ಸಂಬಂಧಿಸಿದ ಕಥೆ ಹಾಡು ಹೇಳಿಸಬಹುದು.<br>ಕನ್ನಡದ ನಾಡು, ನುಡಿ ಶ್ರೀಮಂತಗೊಳಿಸಿದ ವ್ಯಕ್ತಿಗಳ ಚಿತ್ರಗಳನ್ನು ತೋರಿಸಿ ಅವರನ್ನು ಗುರುತಿಸಲು ಹೇಳಬಹುದು. ಅವರ ಸಾಧನೆ, ಕಾಣಿಕೆ ಏನು ಎಂದು ಕೇಳಬಹುದು.<br>ಯಾವುದಾದರೊಂದು ಜನಪದೀಯ ಆಚರಣೆ ಅಥವಾ ಹಬ್ಬದ ಆಚರಣೆ ಹೇಗೆ ನಡೆಯುತ್ತದೆ ಎಂದು ಹೇಳಲು ತಿಳಿಸಬಹುದು.<br>ಕರ್ನಾಟಕದ ವಿವಿಧ ಭಾಗಗಳಲ್ಲಿ ಜನರು ಧರಿಸುವ ಉಡುಪುಗಳನ್ನು ತೋರಿಸಿ ಅವರು ಯಾವ ಭಾಗದವರು ಎಂದು ಕೇಳಬಹುದು. |

**7ನೆಯ ತರಗತಿಯ ಮಕ್ಕಳ ಪ್ರಗತಿ ತಿಳಿಯಲು ಈ ಕೆಳಗಿನ ತಂತ್ರಗಳನ್ನು ಬಳಸಬಹುದು.**

ಸಂದರ್ಶನ

ಇಡೀ ಗುಂಪು ಚರ್ಚೆ

ವೈಯಕ್ತಿಕ ಕಾರ್ಯಗಳನ್ನು ನೀಡುವುದು

ಶಿಕ್ಷಕರೊಡನೆ ಚರ್ಚೆ

ಕಿರು ಪರೀಕ್ಷೆ ನೀಡುವುದು – ಮುಖ್ಯವಾಗಿ ಪರಿಕಲ್ಪನೆಗಳ ಅರ್ಥೈಸಿಕೊಳ್ಳುವಿಕೆ ತಿಳಿಯಲು

ಅವಲೋಕನ

## ಶಾಲೆಗಳು – ನಿರ್ವಹಣಾ ಸೂಚಕಗಳು

1. ವಿಶೇಷ ಆವಶ್ಯಕತೆಯುಳ್ಳ ಮಕ್ಕಳಿಗೆ ಕಲಿಕೆಗೆ ಪೂರಕವಾದ ಎಲ್ಲ ಭೌತಿಕ ಸೌಲಭ್ಯ ಹಾಗೂ ಮುಕ್ತ ವಾತಾವರಣವಿದೆ.
2. ಮಕ್ಕಳು ಯಾವುದೇ ಹಿಂಜರಿಕೆಯಿಲ್ಲದೆ ಶಿಕ್ಷಕರನ್ನು ಭೇಟಿಯಾಗಬಹುದು.
3. ಆಕರ್ಷಕವಾದ ಪರಿಸರವಿದೆ.
4. ವೈವಿಧ್ಯಮಯ ಚಟುವಟಿಕೆಗಳ ಮೂಲಕ ವೈಯಕ್ತಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶವಿದೆ.
5. ಶಿಕ್ಷಕರ ಅನುಪಸ್ಥಿತಿಯಲ್ಲಿಯೂ ಮಕ್ಕಳು ಕಲಿಕೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೆ.
6. ಶಾಲಾ ಪ್ರಕ್ರಿಯೆಗಳಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಅವಕಾಶವಿದೆ.
7. ಮಕ್ಕಳ ಹಕ್ಕುಗಳನ್ನು ಗೌರವಿಸಲಾಗುತ್ತದೆ.
8. ಕಲಿಕೆಯ ಅನುಭವಗಳನ್ನು ನೀಡಲು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿಕೊಳ್ಳಲಾಗುತ್ತದೆ.
9. ಕ್ರಿಯಾಶೀಲ ವಿಷಯವಾರು ಸಂಘಗಳಿರುತ್ತವೆ.

## ಶಾಲೆಗಳ ಸ್ವಮೌಲ್ಯಮಾಪನ ನಮೂನೆ

**ಶಾಲೆಯ ಹೆಸರು-------------ಮೌಲ್ಯಮಾಪನ ವರ್ಷ------------ತಿಂಗಳು**

| sep | Dec | Mar |
|---|---|---|

### ಪ್ರಶ್ನಾವಳಿ – ಶಾಲೆಯ ಮುಖ್ಯ ಶಿಕ್ಷಕರಿಗಾಗಿ

✓ ನಿಮ್ಮ ಶಾಲೆಯ ಕುರಿತಂತೆ ಇದೊಂದು ಪ್ರಶ್ನಾವಳಿ. ಇದರಲ್ಲಿನ ಐಟಂಗಳಿಗೆ ನೀವು ನೀಡುವ ಉತ್ತರಗಳಲ್ಲಿ ತಪ್ಪು ಅಥವಾ ಸರಿ ಎಂದಿಲ್ಲ. ನಿಮ್ಮ ಉತ್ತರಗಳನ್ನು ಐದು ಅಂಶಗಳ ಸ್ಕೇಲ್ ನಲ್ಲಿ ಗುರುತಿಸಿ. ಈ ಪ್ರಶ್ನಾವಳಿ ನಿಮ್ಮನ್ನು ಸ್ವಾವಲೋಕನದಲ್ಲಿ ತೊಡಗಿಸಿಕೊಳ್ಳಬೇಕು, ಇದರಿಂದ ಶಾಲೆಗೆ ಏನಾಗಬೇಕು ಎಂಬ ಅರಿವು ನಿಮ್ಮಲ್ಲಿ ಮೂಡುತ್ತದೆ ಎಂದು ಆಶಿಸಿದೆ. ಇಲ್ಲಿನ ಎಲ್ಲ ಐಟಂಗಳಿಗೂ ನೀವು ಸಂಪೂರ್ಣ ಒಪ್ಪಿಗೆ ಸೂಚಿಸಿದರೆ ನಿಮ್ಮ ಶಾಲೆ ಉತ್ತಮ ಶಾಲೆ ಎನ್ನಬಹುದು.

ಸಂಪೂರ್ಣ ಒಪ್ಪುತ್ತೇನೆ – 5
ಸುಮಾರು ಮಟ್ಟಿಗೆ ಒಪ್ಪುತ್ತೇನೆ – 4
ಒಪ್ಪುತ್ತೇನೆ. – 3
ಹೆಚ್ಚಿನ ಮಟ್ಟಿಗೆ ಒಪ್ಪುವುದಿಲ್ಲ. – 2
ಒಪ್ಪುವುದೇ ಇಲ್ಲ. – 1

✓ ನಿಮ್ಮ ಉತ್ತರಗಳಿಗೆ ನೀವೇ ಈ ಮೇಲಿನಂತೆ ಅಂಕಗಳನ್ನು ಕೊಟ್ಟುಕೊಳ್ಳಿ. ನಿಮ್ಮ ಒಟ್ಟು ಅಂಕಗಳನ್ನು ತಿಳಿಯಿರಿ. ನಿಮ್ಮ ಶಾಲೆಯ ಮಟ್ಟವನ್ನು ನೀವೇ ತಿಳಿಯಿರಿ.

110 ರಿಂದ 125 – ಅತ್ಯುತ್ತಮ
90 ರಿಂದ 109 – ಉತ್ತಮ
70 ರಿಂದ 89 – ಸಾಧಾರಣ
50 ರಿಂದ 69 – ಹೆಚ್ಚು ಕಾಳಜಿ ಅಗತ್ಯವಿದೆ
49 ರಿಂದ ಕೆಳಗೆ – ತೀವ್ರ ಗತಿಯಲ್ಲಿ ಸುಧಾರಿಸಬೇಕಾಗಿದೆ.

✓ ಈ ಪ್ರಶ್ನೆಗಳಿಗೆ ನೀಡಿದ ಉತ್ತರವನ್ನು ಯಾವ ಕಛೇರಿಗೂ ಕಳುಹಿಸಬಾರದು. ಆದರೆ ಉಸ್ತುವಾರಿದಾರರು ಕೇಳಿದಾಗ ಇದನ್ನು ತೋರಿಸಬೇಕು.

✓ ಪ್ರತಿ ತ್ರೈಮಾಸಿಕದಲ್ಲಿ ತುಂಬಿ ಆಗಿರುವ ಪ್ರಗತಿಯನ್ನು ಗುರುತಿಸಿಕೊಳ್ಳಬೇಕು.

## ಪ್ರಶ್ನಾವಳಿ

1. ಮಕ್ಕಳು ಶಿಕ್ಷಕರನ್ನು ಅಗತ್ಯವಿರುವಾಗಲೆಲ್ಲ ಮುಕ್ತವಾಗಿ ಸಂಪರ್ಕಿಸಲು ಅವಕಾಶವಿದೆ.
2. ತರಗತಿಯ ಎಲ್ಲ ಮಕ್ಕಳು ಗುಂಪು ಚಟುವಟಿಕೆಗಳಲ್ಲಿ ಮುಕ್ತವಾಗಿ ಭಾಗವಹಿಸುತ್ತಾರೆ.
3. ಎಲ್ಲ ಮಕ್ಕಳಿಗೂ ಸಮಾನ ಅವಕಾಶ ನೀಡಲಾಗುತ್ತದೆ.
4. ವಿಶೇಷ ಆವಶ್ಯಕತೆಯುಳ್ಳ ಮಕ್ಕಳಿಗೆ ಅಗತ್ಯವಿರುವ ಭೌತಿಕ ಸೌಲಭ್ಯ ನೀಡಲಾಗಿದೆ.
5. ವಿಶೇಷ ಆವಶ್ಯಕತೆಯುಳ್ಳ ಮಕ್ಕಳಿಗಾಗಿ ಕಾಲಕಾಲಕ್ಕೆ ವೈದ್ಯಕೀಯ ತಪಾಸಣೆ ನಡೆಸಲಾಗುತ್ತದೆ.
6. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಪಠ್ಯ ಹಾಗೂ ಸಹಪಠ್ಯ ಚಟುವಟಿಕೆಗಳಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡಲಾಗುತ್ತದೆ.
7. ಮಕ್ಕಳ ಪ್ರತಿಭೆ ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ.
8. ಶಿಕ್ಷಕರ ಅನುಪಸ್ಥಿತಿಯಲ್ಲಿಯೂ ಮಕ್ಕಳು ಸ್ವಕಲಿಕೆಯಲ್ಲಿ ತೊಡಗಿಕೊಳ್ಳುತ್ತಾರೆ.
9. ಮಕ್ಕಳಿಗೆ ಸ್ವಕಲಿಕೆಗೆ ಬೇಕಾದ ಮಾರ್ಗದರ್ಶನ ನೀಡಲಾಗುತ್ತದೆ.
10. ಮಕ್ಕಳಲ್ಲಿ ಅವರ ಹಕ್ಕುಗಳ ಕುರಿತು ಅರಿವು ಬೆಳೆಸುವ ಪ್ರಯತ್ನ ಮಾಡಲಾಗಿದೆ.
11. ಶಾಲೆಯಲ್ಲಿ ದೂರುಪೆಟ್ಟಿಗೆ ಲಭ್ಯವಿದ್ದು ಮಕ್ಕಳ ದೂರುಗಳನ್ನು ಪ್ರತಿದಿನ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.
12. ಸ್ಥಳೀಯ ಮಾನವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಕಲಿಕೆಯ ಚಟುವಟಿಕೆಗಳಲ್ಲಿ ಬಳಸಲಾಗುತ್ತದೆ.
13. ಶಾಲೆಯ ಪಾಠಪ್ರವಚನಗಳು ನಿಗದಿಯಾದಂತೆ ಯಾವುದೇ ತೊಂದರೆಯಿಲ್ಲದೆ ನಡೆಯುತ್ತವೆ.
14. ಎಲ್ಲ ಭೌತಿಕ ಸೌಲಭ್ಯಗಳೂ ಅಗತ್ಯವಿರುವಷ್ಟು ಇವೆ.
15. ಶಾಲೆಯ ಸುತ್ತಲಿನ ಪರಿಸರವು ಸ್ವಚ್ಛವಾಗಿದ್ದು ಆಕರ್ಷಕವಾಗಿದೆ.
16. ಶಾಲೆಯಲ್ಲಿ ವಿಷಯವಾರು ಕ್ಲಬ್ ಗಳಿದ್ದು ವಿವಿಧ ಸಹಪಠ್ಯ ಚಟುವಟಿಕೆಗಳನ್ನು ಸಂಘಟಿಸಲಾಗುತ್ತದೆ.
17. ಎಸ್ ಡಿ ಎಂ ಸಿ ಸದಸ್ಯರು ಶಾಲೆಯ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುತ್ತಾರೆ.
18. ಸಮುದಾಯದ ಸದಸ್ಯರು ಶಾಲೆಯ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ.
19. ಸಮುದಾಯದ ಸದಸ್ಯರಿಗೆ ಶಾಲೆಯ ಮೇಲೆ, ಶಿಕ್ಷಕರ ಮೇಲೆ ಗೌರವ ಭಾವನೆಯಿದೆ.
20. ಎಲ್ಲ ಮಕ್ಕಳು ಜೊತೆಯಾಗಿ ಕುಳಿತು ಬಿಸಿಯೂಟ ಮಾಡುತ್ತಾರೆ.
21. ಶಿಕ್ಷಕರು ಬಿಸಿಯೂಟ ಬಡಿಸಲು ನೆರವಾಗುತ್ತಾರೆ.
22. ಸಮುದಾಯದ ಸದಸ್ಯರು ಬಿಸಿಯೂಟದ ಸಂದರ್ಭ ಶಾಲೆಯಲ್ಲಿ ಹಾಜರಿರುತ್ತಾರೆ.
23. ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಎಲ್ಲ ಪೋಷಕರೂ ಭಾಗವಹಿಸುತ್ತಾರೆ.
24. ಸರಕಾರ ಕೊಡಮಾಡುವ ಎಲ್ಲ ಪ್ರೋತ್ಸಾಹದಾಯಕ ಯೋಜನೆಗಳನ್ನೂ ಶಾಲೆಯಲ್ಲಿ ನಿಯಮಾನುಸಾರ ಅನುಷ್ಠಾನಗೊಳಿಸಿದೆ.
25. ಮಕ್ಕಳು ತಮ್ಮ ಊರು, ಊರಿನ ಜನ, ಸಂಸ್ಕೃತಿ, ಭಾಷೆಗಳ ಬಗ್ಗೆ ಪ್ರೀತಿ ಬೆಳೆಸಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತದೆ.

# <u>ಸಮೂಹ ಸಂಪನ್ಮೂಲ ವ್ಯಕ್ತಿಗಳ ಸ್ವಯಂ ಮೌಲ್ಯಮಾಪನ ನಮೂನೆ</u>

**ಪ್ರಶ್ನಾವಳಿ – ಸಿ ಆರ್ ಪಿ ೦ುವರಿಗಾಗಿ**

- ✓ ಇದರಲ್ಲಿನ ಐಟಂಗಳಿಗೆ ನೀವು ನೀಡುವ ಉತ್ತರಗಳಲ್ಲಿ ತಪ್ಪು ಅಥವಾ ಸರಿ ಎಂದಿಲ್ಲ. ನಿಮ್ಮ ಉತ್ತರಗಳನ್ನು ಐದು ಅಂಶಗಳ ಸ್ಕೇಲ್ ನಲ್ಲಿ ಗುರುತಿಸಿ. ಈ ಪ್ರಶ್ನಾವಳಿ ನಿಮ್ಮನ್ನು ಸ್ವಾವಲೋಕನದಲ್ಲಿ ತೊಡಗಿಸಿಕೊಳ್ಳಬೇಕು, ಇದರಿಂದ ನಿಮ್ಮ ಕ್ಲಸ್ಟರ್‌ಗೆ ಏನಾಗಬೇಕು ಎಂಬ ಅರಿವು ನಿಮ್ಮಲ್ಲಿ ಮೂಡುತ್ತದೆ ಎಂದು ಆಶಿಸಿದೆ. ಇಲ್ಲಿನ ಎಲ್ಲ ಐಟಂಗಳಿಗೂ ನೀವು ಸಂಪೂರ್ಣ ಒಪ್ಪಿಗೆ ಸೂಚಿಸಿದರೆ ನಿಮ್ಮ ಕ್ಲಸ್ಟರ್ ಉತ್ತಮ ಕ್ಲಸ್ಟರ್ ಎನ್ನಬಹುದು.

| | | |
|---|---|---|
| ಸಂಪೂರ್ಣ ಒಪ್ಪುತ್ತೇನೆ | – | 5 |
| ಸುಮಾರು ಮಟ್ಟಿಗೆ ಒಪ್ಪುತ್ತೇನೆ | – | 4 |
| ಒಪ್ಪುತ್ತೇನೆ. | – | 3 |
| ಹೆಚ್ಚಿನ ಮಟ್ಟಿಗೆ ಒಪ್ಪುವುದಿಲ್ಲ. | – | 2 |
| ಒಪ್ಪುವುದೇ ಇಲ್ಲ. | – | 1 |

- ✓ ನಿಮ್ಮ ಉತ್ತರಗಳಿಗೆ ನೀವೇ ಈ ಮೇಲಿನಂತೆ ಅಂಕಗಳನ್ನು ಕೊಟ್ಟುಕೊಳ್ಳಿ. ನಿಮ್ಮ ಒಟ್ಟು ಅಂಕಗಳನ್ನು ತಿಳಿಯಿರಿ. ನಿಮ್ಮ ಶಾಲೆ೦ು ಮಟ್ಟವನ್ನು ನೀವೇ ತಿಳಿಯಿರಿ.

| | | |
|---|---|---|
| 110 ರಿಂದ 125 | – | ಅತ್ಯುತ್ತಮ |
| 90 ರಿಂದ 109 | – | ಉತ್ತಮ |
| 70 ರಿಂದ 89 | – | ಸಾಧಾರಣ |
| 50 ರಿಂದ 69 | – | ಹೆಚ್ಚು ಕಾಳಜಿ ಅಗತ್ಯವಿದೆ |
| 49 ರಿಂದ ಕೆಳಗೆ | – | ತೀವ್ರ ಗತಿ೦ುಲ್ಲಿ ಸುಧಾರಿಸಬೇಕಾಗಿದೆ. |

- ✓ ಈ ದಾಖಲೆ೦ುನ್ನು ಕ್ಲಸ್ಟರ್ ಕೇಂದ್ರದಲ್ಲಿ ಭರ್ತಿಮಾಡಿ ಇರಿಸಿಕೊಳ್ಳಿ. ನಿಮ್ಮ ಕ್ಲಸ್ಟರನ್ನು ಅತ್ಯುತ್ತಮ ಕ್ಲಸ್ಟರ್ ಆಗಿ ಮಾಡಲು ನೀವು ಕೈಗೊಂಡಿರುವ ಕ್ರಮಗಳ ಕ್ರಿ೦ಾ ೦ೋಜನೆ೦ುನ್ನೂ ಇರಿಸಿಕೊಳ್ಳಿ. ಕ್ಲಸ್ಟರ್ ಗೆ ಭೇಟಿ ನೀಡುವ ಅಧಿಕಾರಿಗಳಿಗೆ ಹಾಗೂ ಸಮುದಾ೦ುದ ಸದಸ್ಯರಿಗೆ ನಿಮ್ಮ ಕ್ಲಸ್ಟರ್ ನ್ನು ಅತ್ಯುತ್ತಮ ಕ್ಲಸ್ಟರ್ ಆಗಿ ಮಾಡಲು ನೀವು ೦ಾವ ರೀತಿ ಪ್ರ೦ುತ್ನ ಮಾಡುತ್ತಿರುವಿರಿ ಎಂದು ಪುರಾವೆ ಸಹಿತ ತಿಳಿಸಿ.
- ✓ ಈ ದಾಖಲೆಯನ್ನು ಯಾವ ಕಛೇರಿಗೂ ನೀಡಬಾರದು. ಆದರೆ ಹಿರಿಯ ಅಧಿಕಾರಿಗಳು ಕೇಳಿದಾಗ ಇದನ್ನು ತೋರಿಸಬೇಕು.
- ✓ ಪ್ರತಿ ತ್ರೈಮಾಸಿಕದಲ್ಲಿ ಇದನ್ನು ಭರ್ತಿ ಮಾಡಿ ಪ್ರಗತಿಯನ್ನು ಗುರುತಿಸಿಕೊಳ್ಳಬೇಕು.

**ಪ್ರಶ್ನಾವಳಿ**

1. ನನಗೆ ರಾಷ್ಟ್ರೀ೦ು ಪಠ್ಯಕ್ರಮ ಚೌಕಟ್ಟು 2005 ಹಾಗೂ ಇತರ ಶಿಕ್ಷಣ ಚಿಂತನೆಗಳ ಅರಿವಿದೆ.
2. ಶಿಕ್ಷಣವಾರ್ತೆ ಮತ್ತು ಇತರ ಶೈಕ್ಷಣಿಕ ವಾರ್ತಾಪತ್ರಗಳನ್ನು ತಪ್ಪದೇ ಓದುತ್ತೇನೆ.
3. ಶಿಕ್ಷಕರಿಗೆ ಸರಬರಾಜಾದ ಎಲ್ಲ ತರಬೇತಿ ಸಂಚಿಗಳನ್ನು ನಾನು ಓದಿರುತ್ತೇನೆ.
4. ಶಿಕ್ಷಕರ ತರಬೇತಿ ಕಾರ್ಯ್ರಕ್ರಮಗಳಲ್ಲಿ ನಾನು ಸಕ್ರಿ೦ುವಾಗಿ ಭಾಗವಹಿಸುತ್ತೇನೆ.
5. ನನ್ನ ಕ್ಲಸ್ಟರ್ ಹೇಗೆ ಅಭಿವೃದ್ಧಿ ಹೊಂದಬೇಕು ಎಂಬ ಬಗ್ಗೆ ನನಗೆ ನನ್ನದೇ ಆದ ಕಾಣ್ಕೆಗಳಿವೆ.
6. ನನ್ನ ಕ್ಲಸ್ಟರ್‌ನ ಪ್ರತಿ ಶಾಲೆ೦ು ಅಭಿವೃದ್ಧಿ ಬಗೆಗೂ ನನಗೆ ಕಾಣ್ಕೆಗಳಿವೆ ಹಾಗೂ ಅವನ್ನು ನಾನು ಶಾಲೆ೦ು ಎಲ್ಲ ವಾರಸುದಾರರೊಡನೆ ಹಂಚಿಕೊಳ್ಳುತ್ತೇನೆ.

7. ನನ್ನ ಕ್ಲಸ್ಟರ್ ನಲ್ಲಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುವ ಶಿಕ್ಷಕರು 0ಯಾರು ಎಂದು ನನಗೆ ಗೊತ್ತು. ಅವರಿಗೆ ನಾನು ಸಾಕಷ್ಟು ಪ್ರೋತ್ಸಾಹ ನೀಡುತ್ತಿರುತ್ತೇನೆ.
8. ನನ್ನ ಕ್ಲಸ್ಟರ್ ನ ವ್ಯಾಪ್ತಿ0ಯ ಶಾಲೆಗಳಲ್ಲಿನ ಉತ್ತಮ ಆಚರಣೆಗಳ ವಿವರಗಳನ್ನು ನಾನು ಕ್ಲಸ್ಟರ್ ಸಮಾಲೋಚನಾ ಸಭೆಗಳಲ್ಲಿ ಎಲ್ಲರ ಜೊತೆ ಹಂಚಿಕೊಳ್ಳುತ್ತೇನೆ.
9. ಕ್ಲಸ್ಟರ್ ವ್ಯಾಪ್ತಿ0ಯ ಶಾಲೆಗಳಲ್ಲಿನ ಉತ್ತಮ ಆಚರಣೆಗಳನ್ನು ದಾಖಲಿಸಿಕೊಳ್ಳುತ್ತೇನೆ
10. ಶಿಕ್ಷಕರು ಇತರ ಶಾಲೆಗಳಿಗೆ ಭೇಟಿ ನೀಡಿ ಅಲ್ಲಿನ ಆಚರಣೆಗಳನ್ನು ಅವಲೋಕಿಸಲು ಅವಕಾಶ ನೀಡುತ್ತೇನೆ.
11. ಕ್ಲಸ್ಟರ್‌ನ ಎಲ್ಲ ಶಾಲೆಗಳ ಪ್ರೊಫೈಲ್ ನಿರ್ವಹಿಸುತ್ತಿದ್ದೇನೆ.
12. ಕ್ಲಸ್ಟರ್ ನ ಎಲ್ಲ ಶಿಕ್ಷಕರ ಪ್ರೊಫೈಲ್ ನಿರ್ವಹಿಸುತ್ತಿದ್ದೇನೆ.
13. ಶಿಕ್ಷಕರ ಆವಶ್ಯಕತೆಗಳನ್ನು ಗುರುತಿಸಿ ಅವರಿಗೆ ಅಗತ್ಯವಿರುವ ತರಬೇತಿಗಳಿಗೆ ಅವರನ್ನು ನಿ0ಯೋಜಿಸುತ್ತೇನೆ.
14. ಶಿಕ್ಷಕರು ತರಬೇತಿ0ಯಲ್ಲಿ ಕಲಿತ ಅಂಶಗಳನ್ನು ತರಗತಿ0ಯಲ್ಲಿಅನುಷ್ಠಾನಗೊಳಿಸುತ್ತಾರೆ0ಯೋ ಎಂದು ಅನುಪಾಲನೆ ಮಾಡುತ್ತೇನೆ. ಈ ಬಗ್ಗೆ ಮೇಲಿನ ಕಛೇರಿಗಳಿಗೆ ವರದಿ ಮಾಡುತ್ತೇನೆ.
15. ಕ್ಲಸ್ಟರ್ ನ ಹಾಗೂ ಶಾಲೆಗಳ ಕಾಣ್ಕೆಗಳನ್ನು ಎಲ್ಲ ವಾರಸುದಾರರ ಸಹಭಾಗಿತ್ವದಲ್ಲಿ ರೂಪಿಸುತ್ತೇನೆ.
16. ಶಾಲಾ ಶೈಕ್ಷಣಿಕ 0ಯೋಜನೆ ತ0ಯಾರಿಸಲು ಅಗತ್ಯ ಮಾರ್ಗದರ್ಶನ ನೀಡುತ್ತೇನೆ.
17. ಕ್ಲಸ್ಟರ್ ಶೈಕ್ಷಣಿಕ 0ಯೋಜನೆ ತ0ಯಾರಿಸಿ ಅದನ್ನು ಅನುಷ್ಠಾನಿಸುತ್ತೇನೆ.
18. ಪ್ರೋತ್ಸಾಹದಾ0ಯಕ 0ಯೋಜನೆಗಳು ಸಕಾಲದಲ್ಲಿ ಶಾಲೆಗೆ ತಲುಪುವಂತೆ ನೋಡಿಕೊಳ್ಳುತ್ತೇನೆ.
19. ಒಂದು ದಿನದಲ್ಲಿ ಎರಡು ಶಾಲೆ0ಯಲ್ಲಿದ್ದು ಅಲ್ಲಿನ ಪ್ರಗತಿ0ಯನ್ನು, ತರಗತಿ ಪ್ರಕ್ರಿ0ಯೆಗಳನ್ನು ವಿವರವಾಗಿ ಪರಿಶೀಲಿಸಿ ಅಗತ್ಯ ಹಿಮ್ಮಾಹಿತಿ ನೀಡುತ್ತೇನೆ.
20. ಪ್ರತಿ ಶಾಲಾ ಭೇಟಿ0ಯಲ್ಲಿ0ಯೂ ಎಲ್ಲ ಶಿಕ್ಷಕರೊಡನೆ ಸಭೆ ನಡೆಸಿ ನನ್ನ ಕಾಣ್ಕೆಗಳನ್ನು ಅವರೊಂದಿಗೆ ಹಂಚಿಕೊಳ್ಳುತ್ತೇನೆ.
21. ಪ್ರತಿ ಶಾಲೆಗೂ ನಿರ್ದಿಷ್ಟ ಅವಧಿ0ಯಲ್ಲಿ ಸಾಧಿಸಬಹುದಾದ ಗುರಿಗಳನ್ನು ನೀಡುತ್ತೇನೆ.
22. ಸಿ ಆರ್ ಸಿ ಕೇಂದ್ರವು ಕ್ಲಸ್ಟರ್ ನ ಎಲ್ಲ ಶಾಲೆಗಳಿಗೂ ಸಂಪನ್ಮೂಲ ಕೇಂದ್ರವಾಗಿದೆ.
23. ನನ್ನ ಕ್ಲಸ್ಟರ್ ನ ಎಲ್ಲ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಮಾಹಿತಿ0ಯನ್ನು ನಾನು ಕ್ರಮವಾಗಿ ನಿರ್ವಹಿಸುತ್ತಿದ್ದೇನೆ.
24. ನಾನು ಸಿ ಆರ್ ಪಿ 0ಯಾಗಿ ನಿರ್ವಹಿಸುತ್ತಿರುವ ಕಾರ್ಯಗಳಲ್ಲಿ ನನಗೆ ಸಂಪೂರ್ಣ ನಂಬಿಕೆಯಿದೆ.
25. ಕ್ಲಸ್ಟರ್ ಹಂತದ ಎಲ್ಲ ಸಹಪಠ್ಯ ಚಟುವಟಿಕೆಗಳನ್ನೂ ಕ್ರಮವಾಗಿ ಸಂಘಟಿಸುತ್ತೇನೆ.
26. ಕ್ಲಸ್ಟರ್ ಸಂಪನ್ಮೂಲ ಗುಂಪಿನ ಸಭೆಯನ್ನು ನಿಯಮಿತವಾಗಿ ನಡೆಸಿ; ಸಲಹೆಗಳನ್ನು ಸ್ವೀಕರಿಸುತ್ತೇನೆ.
27. ಕ್ಲಸ್ಟರ್ ಸಮಲೋಚಕನಾ ಸಭೆಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಳ್ಳುತ್ತೇನೆ.
28. ಶಾಲಾ ಭೇಟಿಯ ಅವಧಿಯಲ್ಲಿ ಅಧ್ಯಾಪಕ ಮಿತ್ರರಿಗೆ ಮಾದರಿ ಪಾಠ ನೀಡುತ್ತೇನೆ
29. ಕ್ಲಸ್ಟರಿನ ಅಂಕಿ ಅಂಶಗಳನ್ನು ಕ್ಲುಪ್ತ ಅವಧಿಯಲ್ಲಿ ಮೇಲಿನ ಕಛೇರಿಗೆ ಕಳುಹಿಸುತ್ತಿರುವೆ.
30. ಕ್ಲಸ್ಟರ್ ಮ್ಯಾಗಜೀನನ್ನು ಪ್ರತಿ ತಿಂಗಳು ಹೊರತರುತ್ತಿದ್ದೇನೆ.